(SRI J. NARAYANAPPA).

(*b*) the extent of the land so granted;

(*c*) terms of grant;

(*d*) whether the land so granted has been handed over to the said hostel?

A.—**Sri Kadidal MANJAPPA** (Minister for Revenue and Public Works).—

(*a*) Yes. As per Government Order No. R. 13634-9—L.R. 519-51-1, dated 28th March 1952.

(*b*) 50 acres.

(*c*) The land is sanctioned free of upset price subject to the following conditions:—

1. that the land should not be alienated;

2. that the khate should be in the name of the institution;

3. that the proceeds should be utilised for the benefit of the institution;

4. that the *vahivatdars* shall be responsible for the regular payment of the land revenue on the land.

(*d*) No.

ಶ್ರೀ ಜಿ. ದುಗ್ಗಪ್ಪನವರು (ಹೊಳಲ್ಕೆರೆ–ಅನುಸೂಚಿತ ಜಾತಿಗಳು).—ಯಾವ ಕಾರಣದಿಂದ ವಿದ್ಯಾರ್ಥಿನಿಲಯಗಳಿಗೆ ಜಮೀನನ್ನು ಸ್ವಾಧೀನಕ್ಕೆ ಕೊಟ್ಟಿಲ್ಲ?

ಶ್ರೀ ಕಡಿದಾಳ್ ಮಂಜಪ್ಪನವರು.—ಜಮೀನಿದ್ದವರಿಗೆ ಕೊಟ್ಟಿದ್ದಾರೆಂದು ಅರ್ಜಿ ಬಂದಿದೆ. ಅದರ ಮೇಲೆ ಅದನ್ನು ಸ್ವಾಧೀನಕ್ಕೆ ಕೊಡುವುದನ್ನು ನಿಲ್ಲಿಸಿದೆ.

ಶ್ರೀ ಜಿ. ದುಗ್ಗಪ್ಪನವರು.—ಈಗ ಸಧ್ಯಕ್ಕೆ ಈ ಸಂಸ್ಥೆಗೆ ಬೇರೆ ಯಾವ ಜಮೀನೂ ಇಲ್ಲದಿರುವುದು ಗೊತ್ತ?

ಶ್ರೀ ಕಡಿದಾಳ್ ಮಂಜಪ್ಪನವರು.—ಇರಬಹುದು.

ಶ್ರೀ ಜಿ. ದುಗ್ಗಪ್ಪನವರು.—ಹಾಗಿದ್ದರೆ ಈ ಸಂಸ್ಥೆಗೆ ಜಮೀನನ್ನು ಆದಷ್ಟು ಬೇಗ ಸ್ವಾಧೀನಕ್ಕೆ ಕೊಡುವುದು ಸೂಕ್ತವಲ್ಲವೇ!

ಶ್ರೀ ಕಡಿದಾಳ್ ಮಂಜಪ್ಪನವರು.—ರೆವಿನ್ಯೂ ಕಮೀಷನರಿಂದ ವರದಿ ಬಂದ ಕೂಡಲೆ ಕೊಡಲಾಗುತ್ತದೆ.

ಶ್ರೀ ಜಿ. ದುಗ್ಗಪ್ಪನವರು.—ಯಾವಾಗ ಕೊಡರಾಗುವುದೆಂದು ಹೇಳಲಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

Mr. SPEAKER.—May I suggest that the Hon'ble Member does not put such supplementaries again?

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು (ಗೋರಿಬಿದನೂರು).—ಇಲ್ಲಿ ಎಷ್ಟು ಎಕರೆಗಳನ್ನು ಯಾರಾರಿಗೆ ಕೊಟ್ಟಿದೆಯೆಂಬುದಕ್ಕೆ ಒಂದು ಪಟ್ಟಿಯಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಯಾವ ಜಮೀನು ಎಲ್ಲಿರುವುದು ಎಂದು ಹೇಳಿದರೆ ಹೇಳಬಹುದು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಮುಳ್ಳಿಗರ್‌ವ್ಯಾಲಿ ಪ್ಲಾಂಟೇಷನ್‌ನಲ್ಲಿ ಯಾರಾರಿಗೆ ಎಷ್ಟೆಷ್ಟು ಜಮೀನು ಕೊಟ್ಟಿದೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅಮೇಲೆ ಹೇಳಬಹುದು. ಈಗ ಆಗುವುದಿಲ್ಲ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಆಗಲೇ ನೋಟೀನು ಬಂದಿರುವುದರಿಂದ ಹೇಳಲು ಸಾಧ್ಯವಿಲ್ಲವೇ!

ಶ್ರೀ ಕಡಿದಾಳ್ ಮಂಜಪ್ಪನವರು.—ಈಗ ಪ್ರಶ್ನೆಯಿರುವುದು ಆದಿಜಾಂಬವರ ವಿದ್ಯಾರ್ಥಿನಿಲಯದ ಜಮೀನಿಗೆ ಸಂಬಂಧಪಟ್ಟಿದೆ.

ಶ್ರೀ ಎಚ್. ಸಿ ನಾಗಯ್ಯರೆಡ್ಡಿಯವರು.—ಜಮೀನು ಏರೇಆಗಿರುವ ಪಟ್ಟಿಯಲ್ಲಿ ತಪಶೀಲುಗಳಿಲ್ಲವೇ? ಅದರಲ್ಲಿ ರಬೇಕಲ್ಲವೇ!

ಶ್ರೀ ಕಡಿದಾಳ್ ಮಂಜಪ್ಪನವರು.—ಅದಕ್ಕೆ ಸಂಬಂಧಪಟ್ಟ ಫೈಲು ನೋಡಬೇಕು.

Mr. SPEAKER.—Then the Hon'ble Member will know it.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಹೀಗೆ ಎಲ್ಲಾ ವಿದ್ಯಾರ್ಥಿನಿಲಯಗಳಿಗೂ ಜಮೀನನ್ನು ಕೊಡುವುದಕ್ಕೆ ಯೋಚನೆ ಮಾಡುತ್ತೀರಾ!

ಶ್ರೀ ಕಡಿದಾಳ್ ಮಂಜಪ್ಪನವರು.—ಕೆಲವು ಕಡೆ ಕೊಟ್ಟಿದೆ. ಅಗತ್ಯವಿರುವಕಡೆ ಜಮೀನು ಕೊಡಬೇಕಾಗುತ್ತದೆ.

ಶ್ರೀ ಎ. ಮುನಿಯಪ್ಪನವರು (ಶಿಡ್ಲಘಟ್ಟ–ಚಿಕ್ಕಬಳ್ಳಾಪುರ–ಅನುಸೂಚಿತ ಜಾತಿಗಳು).—ಅಲ್ಲಿ ಜಮೀನನ್ನು ಪಡೆದಿರುವವರು ನಿಜವಾಗಿಯೂ ವ್ಯವಸಾಯಗಾರರ ಒಂದು ಎಕರೆಯಲ್ಲಿ 10–12 ಪಲ್ಲ ಬೆಳೆಯುತ್ತಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

Mr. SPEAKER.—That does not arise.

Audit of Log-books in respect of lorries in Kadur Sub-Division.

Q.—461. **Sri Y. M. CHANDRASEKHARIAH** (Kadur).—

Will the Government be pleased to state:—

(*a*) the number of lorries maintained by the D. P. W.;

(*b*) out of them, the number of lorries in the Chikmagalur Division and the strength of the staff attached to them;

(*c*) whether log-books have been maintained in respect of those lorries;

(*d*) whether the log-books of Kadur Sub-Division have been audited for the years 1948-49, 1949-50 and 1950-51?

A.—**Sri Kadidal MANJAPPA** (Minister for Revenue and Public Works).—

(*a*) 143.

(*b*) 9 (of these, only 4 are in working condition). Strength of staff—4 drivers and 4 cleaners.

(*c*) Yes.

(*d*) Yes, the extracts of log-books were got audited in the Division Office.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಮರಾಮತ್ತು ಇಲಾಖೆಯಲ್ಲಿ ಒಟ್ಟು 143 ಲಾರಿಗಳಿವೆಯೆಂದು ಹೇಳಿದ್ದೀರಿ. ಅವುಗಳಲ್ಲಿ ಎಷ್ಟು ಕೆಲಸ ಮಾಡುತ್ತಿವೆ?

Kadidal MANJAPPA.—I will get you the information; 80 are in working condition.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಚಿಕ್ಕಮಗಳೂರು ಡಿವಿಜ಼ನಲ್ಲಿರುವ 9 ಲಾರಿಗಳ ಪೈಕಿ 4 ಮಾತ್ರ ಸರಿಯಾಗಿ ಕೆಲಸ ಮಾಡುತ್ತಿವೆಯೆಂದು ಹೇಳಿದೆ, ಹಾಗಾದರೆ ಉಳಿಕ್ಕವು ಮುಡಿಯಾಗಿವೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದೇ ಅರ್ಥ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—4 ಲಾರಿಗಳ ಪೈಕಿ ಒಂದು ಮಾತ್ರ ಕೆಲಸ ಮಾಡುತ್ತಿದೆಯೆಂದು ಇಂಜಿನಿಯರಿಂಗ್ ಇಲಾಖೆಯವರು ಆ ಕಡೆ ತಾವು ಪ್ರವಾಸ ಬಂದಾಗ ತಮಗೆ ತಿಳಿಸಲಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ತಿಳಿಸಿದರು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಹಾಗಾದರೆ 4 ಕೆಲಸ ಮಾಡುತ್ತಿವೆಯೆಂದು ಹೇಳುವುದು ಸರಿಯಲ್ಲ, ಅಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಹಾಗೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ತಾವು ಅಲ್ಲಿ ಪ್ರವಾಸ ಬಂದಾಗ ಒಂದು ಮಾತ್ರ ಕೆಲಸ ಮಾಡುತ್ತಿದೆ, ಬಾಕಿಯವು ಕೆಲಸ ಮಾಡುತ್ತಿಲ್ಲ ಎಂದು ಹೇಳಲಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅನಂತರ ಅವುಗಳನ್ನು ರಿಪೇರಿ ಮಾಡಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ತಾವು ಪ್ರವಾಸ ಬಂದು 15 ದಿವಸಗಳಾಗಿವೆ. ಅಷ್ಟರಲ್ಲೇ ರಿಪೇರಿಯಾಗಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಇನ್ನೂ ಹೆಚ್ಚು ಕಾಲವಾಗಿರಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಅಲ್ಲಿ ಲಾರಿಗಳು ಕೆಡುವುದಕ್ಕೆ ಡ್ರೈವರುಗಳು ಮತ್ತು ಕಂಡಕ್ಟರುಗಳು ಕಾರಣರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಗಮನಕ್ಕೆ ಬಂದಿಲ್ಲ. ಅದು ನಿಜವಾಗಿದ್ದರೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಅಲ್ಲಿಗೆ ಹೋದ ನಲ ಲಂಚ ನಿರೋಧ ಶಾಖೆಯವರು ಬಂದು ತನಿಖೆ ಮಾಡಿದಾಗ ಲಾಗ್ ಬುಕ್ಕುಗಳಿಲ್ಲದೆ ಬಿಳೀ ಕಾಗದದ ಮೇಲೆ ಬರೆದಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಆಗ ಲಂಚ ನಿರೋಧ ಸಮಿತಿಯವರು ಸರಿಯಾಗಿ ಲಾಗ್ ಬುಕ್ ಇಟ್ಟಿಲ್ಲವೆಂದು ಧಾರ್ಜು ಮಾಡಿರುವುದು ಗೊತ್ತೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—1948ರಿಂದ 1950 ರ ವರೆಗೆ ಲಾಗ್‌ಬುಕ್ಕುಗಳನ್ನು ತನಿಖೆ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಲಾಗ್ ಬುಕ್ಕು ಇಟ್ಟಿದ್ದಾರೆಂದು ಗೊತ್ತಾಗಿದೆ. ಒಂದು ವೇಳೆ ಇಡದೇಯಿದ್ದರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಸಾಮಾನ್ಯವಾಗಿ ಆಡಿಟ್ ಮಾಡಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಅವಶ್ಯಕವಿದ್ದರೆ ಮಾಡಿಸುತ್ತೇವೆ.

ಶ್ರೀ ಎಚ್. ಕೆ. ಸಿದ್ದಯ್ಯನವರು (ಬೇಲೂರು—ಅನುಸೂಚಿತ ಜಾತಿಗಳು).—ಎರಡು ವರ್ಷಗಳಿಂದ ಏಳೆಂಟು ಲಾರಿಗಳನ್ನು ಎಗ್ಜಿಕ್ಯುಟಿವ್ ಇಂಜಿನಿಯರು ಉಪಯೋಗಿಸದೆ ಇಟ್ಟಿರುವುದೇಕೆ?

Sri Kadidal MANJAPPA.—I have no information.

ಶ್ರೀ ಎಚ್. ಕೆ. ಸಿದ್ದಯ್ಯನವರು.—ಅವು ಜೆನ್ನಾಗಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು (ಚಿತ್ರದುರ್ಗ).—143 ಲಾರಿಗಳ ಪೈಕಿ ಕೆಲಸ ಮಾಡುವುವು ಎಷ್ಟು? ಕೆಲಸ ಮಾಡದಿರುವುವು ಎಷ್ಟು?

Mr. SPEAKER.—It has been answered already.

Sri A. BHEEMAPPA NAIK (Molakalmuru).—Are there any workshops maintained in each district headquarters to repair lorries?

Sri Kadidal MANJAPPA.—No.

Sri A. BHEEMAPPA NAIK.—Where are the lorries in district headquarters repaired now?

Sri Kadidal MANJAPPA.—In workshops.

Sri A. BHEEMAPPA NAIK.—In which workshop?

Sri Kadidal MANJAPPA.—In private workshops.

Sri A. BHEEMAPPA NAIK.—Are there workshops in district headquarters which can repair lorries?

Sri Kadidal MANJAPPA.—Yes, Sir.

Sri A. BHEEMAPPA NAIK.—Are you sure, Sir, that there are private workshops in each district headquarters to repair lorries and buses?

Sri Kadidal MANJAPPA.—In a majority of district headquarters there are such workshops.

Sri A. BHEEMAPPA NAIK.—Are there any proposals to open workshops of Government to repair their lorries and tractors in each district headquarters?

Sri Kadidal MANJAPPA.—It is a costly venture.

Sri A. BHEEMAPPA NAIK.—Is this answer given because somebody said it, or, are there any proposals before Government to have workshops in district headquarters?

Sri Kadidal MANJAPPA.—Recently, a proposal had been submitted to Government. But the Government turned it down as it was a costly venture.

ಶ್ರೀ ಎಂ. ರಾಜಶೇಖರಮೂರ್ತಿಯವರು (ಯಳಂದೂರು).—ಡ್ರೈವರುಗಳು ಚಕ್ರ ಮುಂತಾದುವನ್ನು ಬದಲಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿಲ್ಲ. ಗಮನಕ್ಕೆ ಬಂದಿದ್ದರೆ ನುಮ್ಮನೆ ಇರುತ್ತಿರಲಿಲ್ಲ.

Basis of admissions into Arts and Science Colleges.

Q.—117. **Sri S. SRINIVASA IYENGAR** (T.-Narasipur).—

Will the Government be pleased to state:—

(*a*) whether they, by their Order No. E. 7729—Uni. 81-44, dated 14th June 1946, directed that 75 per cent of the seats in the Medical and Engineering Colleges be reserved for Non-Brahmin candidates;

(*b*) the basis of admission to other Science Colleges?

A.—**Sri A. G. RAMACHANDRA RAO** (Minister for Law and Education).—

(*a*) Yes. But that order has since been modified.

(*b*) Admissions to Arts and Science Colleges are left to the College Committees and almost all the students, who seek admission, are being admitted

Sri S. SRINIVASA IYENGAR.—When was this modified order passed?

Sri A. G. RAMACHANDRA RAO.—Last month.

Sri S. SRINIVASA IYENGAR.—What is the nature of this modified order?

Sri A. G. RAMACHANDRA RAO.—To revise the percentage of admissions to the different categories, namely, Depressed Classes, Backward Classes and others.

9 A.M.

Sri S. SRINIVASA IYENGAR.—Is it true that certain committees have been constituted for settling admissions?

Sri A. G. RAMACHANDRA RAO.—Yes, in respect of technical institutions.

Sri S. SRINIVASA IYENGAR.—On whose initiative were these committees constituted?

Sri A. G. RAMACHANDRA RAO.—On the initiative of the Government.

Sri S. SRINIVASA IYENGAR.—Is it not a fact that the University Council used to send recommendations?

Sri A. G. RAMACHANDRA RAO.—I believe so.

Sri S. SRINIVASA IYENGAR.—May I know the reasons why this year that was not adopted?

Sri A. G. RAMACHANDRA RAO.—Last year, the admissions were finalized rather very late; they went up to the month of September. In order to prevent such a thing Government took the initiative as an emergency measure.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು (ಗೋರಿಬಿದನೂರು).—75 ಪರ್ಸೆಂಟ್ ಇದ್ದುದನ್ನು ಕಡಮೆ ಮಾಡುವುದಕ್ಕೆ ಕಾರಣ ಏನಾದರೂ ಇದೆಯೇ?

Sri A. G. RAMACHANDRA RAO.—To bring the spirit of the Constitution more and more into the several departments.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಈಗ ಮಾಡಿರುವ ರಿನರ್ವೇಷನ್ ಸ್ಪಿರಿಟ್ ಆಫ್ ದಿ ಕಾನ್ಸ್ಟಿಟ್ಯೂಷನ್‌ಗೆ ಸರಿಯಾಗಿದೆ ಎಂದು ತಮ್ಮ ಅಭಿಪ್ರಾಯವೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅದೇ ಸರ್ಕಾರದವರ ಭಾವನೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಈಗ 45 ಪರ್ಸೆಂಟ್ ಮಾಡಿರುವುದು ಕಾನ್ಸ್ಟಿಟ್ಯೂಷನ್ ಪ್ರಕಾರ ಅಡಾಪ್ಟ್ ಮಾಡಿದ ಹಾಗಾಯಿತೇ?

Sri A. G. RAMACHANDRA RAO.—It is argumentative.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಈಗ ಮಾಡಿರುವುದರಲ್ಲಿ ಕೆಲವನ್ನು ಮೆರಿಟ್ ಮೇಲೆ ನೋಡಿ ಕೊಡಬೇಕೆಂದು ತಾನೆ?

Sri A. G. RAMACHANDRA RAO.—Mostly.

ಶ್ರೀ ಬಿ. ಹುಚ್ಚೇಗೌಡರು.—ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕವರಿಗೆ ಇರತಕ್ಕ ಅನಾನುಕೂಲಗಳಿಂದ ಎಂದರೆ, ಪಟ್ಟಣವಾಸಗಳಲ್ಲಿರತಕ್ಕವರಿಗೆ ಇರುವಷ್ಟು ಅನುಕೂಲ ಇಲ್ಲದೆ, ಅವರಿಗೆ ಹೆಚ್ಚು ನಂಬರು ತೆಗೆದು ಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬುದು ಗೊತ್ತೇ?

Sri A. G. RAMACHANDRA RAO.—It is a matter of opinion.